ಕೆಲಸ ಮಾಡುವುದಕ್ಕೆ ಮತ್ತು ಆ ಮೂಲಕ ಸಾರ್ವಜನಿಕ ಸವಲತ್ತನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಅವರಿಗೆ ವಿನಂತಿ ಮಾಡುತ್ತೇನೆ.

ಸೊರಬ ಪಟ್ಟಣದಲ್ಲಿ ಕೆ. ಎಸ್. ಆರ್. ಟಿ. ಸಿ ಬಸ್‌ಸ್ಟಾಂಡ್ ಕಾಮಗಾರಿಯನ್ನು ಪ್ರಾರಂಭಿಸುವುದು.

(6) l. ಶ್ರೀ ಕುಮಾರ್ ಬಂಗಾರಪ್ಪ ಎಸ್. (ಸೊರಬ) ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೊರಬ ಪಟ್ಟಣದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಆ) ಈ ಬಸ್ ಸ್ಟ್ಯಾಂಡ್ ಕಾಮಗಾರಿಯನ್ನು ಕೆ.ಎಸ್.ಆರ್.ಟಿ.ಸಿ.ಯ ಯಾವ ವಿಭಾಗ ನಿರ್ವಹಿಸುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯ ಸೊರಬ ಪಟ್ಟಣವು ರಾಷ್ಟ್ರೀಕೃತವಲ್ಲದ ವಲಯದಲ್ಲಿದ್ದು, ಇಲ್ಲಿನ ಬಹುಕೇತ ಸಾರಿಗೆ ಅವಶ್ಯಕತೆಗಳನ್ನು ಖಾಸಗಿಯವರು ಪೂರೈಸುತ್ತಿದ್ದಾರೆ. ಪ್ರಸ್ತುತ ಸೊರಬ ಪಟ್ಟಣದ ಮೂಲಕ ಕ.ರಾ.ರ.ಸಾ. ಸಂಸ್ಥೆಯ 34 ಆಗಮನ ಮತ್ತು 34 ನಿರ್ಗಮನಗಳು ಕಾರ್ಯಾಚರಣೆಯಲ್ಲಿದ್ದು, ಸಧ್ಯಕ್ಕೆ ಸೊರಒ ಪಟ್ಟಣದಲ್ಲಿ ಕ.ರಾ.ರ.ಸಾ.ಸಂಸ್ಥೆಯ ಬಸ್ಸು ನಿಲ್ದಾಣದ ಅವಶ್ಯಕತೆ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೇಳಿರತಕ್ಕಂಥ ಪ್ರಶ್ನೆ ಬಹಳ ಮೂಲಭೂತವಾಗಿರತಕ್ಕಂಥ ಪ್ರಶ್ನೆ, ಅಂದರೆ ಸೊರಬ ತಾಲ್ಲೂಕಿಗೆ ಒಂದು ಬಸ್ ಸ್ಟ್ಯಾಂಡ್ ಬೇಕಾಗಿರತಕ್ಕಂಥದ್ದರ ಬಗ್ಗೆ ಕೇಳಿದ್ದೇನೆ. ಇದಕ್ಕೆ ಸಚಿವರಾದ ತಾವು ಕೊಟ್ಟಿರತಕ್ಕಂಥದ್ದರಲ್ಲಿ ಬಸ್‌ಸ್ಟ್ಯಾಂಡ್ ಅವಶ್ಯಕತೆಯೇ ಇಲ್ಲಿ ಇಲ್ಲ ಎನ್ನತಕ್ಕಂಥ ವಾದವನ್ನು ನೀವು ಹೇಳಿದ್ದೀರಿ. ಮೂಲಭೂತವಾಗಿ ನಿಮ್ಮ ಬಜೆಟ್‌ನಲ್ಲಿಯೇ ಹೇಳಿರತಕ್ಕಂಥದ್ದರಲ್ಲಿ ಪ್ರಮುಖ ಉದ್ದೇಶವಾದ ಸಾರಿಗೆ ಸೇವೆಗಳನ್ನು ಒದಗಿಸುವುದೇ ಪ್ರಮುಖ ಉದ್ದೇಶವೆಂದು ಹೇಳಿ, ಇದು ಸುಮಾರು ಎಳೆಂಟು ವರ್ಷಗಳ ಕಾಲದಿಂದ ಹೈ ಕೋರ್ಟ್‌ಗೆಲ್ಲಾ ಹೋಗಿ ಎಂಟು ವರ್ಷಗಳ ಕಾಲ ಸತತವಾಗಿ ಹೋರಾಟ ಮಾಡಿದ ನಂತರ ಈಗ ಸರ್ಕಾರಿ ಜಾಗವನ್ನು ಕೆ.ಎಸ್.ಆರ್.ಟಿ.ಸಿ.ಗೆ ಕೊಡಬೇಕೆಂದು ತೀರ್ಮಾನ ಮಾಡಿ ಈಗ ಹ್ಯಾಂಡ್‌ಓವರ್ ಮಾಡಿದ್ದೇವೆ. ಈಗ ಅಲ್ಲಿ ಕೇವಲ 34 ಬಸ್ಸುಗಳು ಓಡಾಡುತ್ತಿದ್ದು, ಅಲ್ಲಿ ಬಸ್‌ಸ್ಟ್ಯಾಂಡ್‌ನ ಅವಶ್ಯಕತೆಯಿಲ್ಲವೆಂದು ಹೇಳುತ್ತಿದ್ದೀರಿ

ನೀವು truck terminals ಅದಕ್ಕೆ ಇದಕ್ಕೆ ಎಲ್ಲಾದಕ್ಕೂ ಕೂಡ ಹಣ ಒದಗಿಸಿಕೊಡುತ್ತೇವೆಂದು ಅಲ್ಲಿ ಹೇಳುತ್ತಿದ್ದೀರಿ. ಮೂಲಭೂತವಾಗಿ ಜನಗಳಿಗೆ ಒಂದು ತಾಲ್ಲೂಕಿಗೆ ಬಸ್‌ನಿಲ್ದಾಣ ಬೇಕೆಂದು ಕೇಳಿರುವಂತಹ ಸಂದರ್ಭದಲ್ಲಿ ನೀವು ಬಸ್‌ನಿಲ್ದಾಣದ ಅವಶ್ಯಕತೆಯಿಲ್ಲವೆಂದು ನಿಮ್ಮ ವಾದವನ್ನು ಈ ರೀತಿ ಕೊಟ್ಟರೆ, ನೀವು ಹೇಗೆ ಬಸ್ಸುಗಳನ್ನು ಓಡಾಡಿಸುತ್ತೀರಿ ಹಾಗೂ ಹೇಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎನ್. ಚೆಲುವರಾಯ ಸ್ವಾಮಿ : ಮಾನ್ಯ ಅಧ್ಯಕ್ಷರೆ, ನಮ್ಮ ಈ ಸರ್ಕಾರ ಎಲ್ಲಾ ಭಾಗದಲ್ಲಿ ಬಸ್‌ನಿಲ್ದಾಣದ ಕೊಡತಕ್ಕಂಥಾದ್ದು ಹಾಗೂ ನವೀಕರಣ ಮಾಡತಕ್ಕಂಥಾದ್ದು ಅಲ್ಲದೆ ಹೆಚ್ಚು ಗ್ರಾಮೀಣ ಪ್ರದೇಶಗಳಲ್ಲಿ ಬಸ್ಸುಗಳನ್ನು ಒದಗಿಸುವಂತಹ ವಿಚಾರದಲ್ಲಿ ಬದ್ಧವಾಗಿದೆ. ಇದೆಲ್ಲಾ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಆದರೆ ಇಲ್ಲಿಯವರೆಗೆ ಕೆಲಸ ಆಗದೇ ಇರುವುದಕ್ಕೆ ನಾನು ಕಾರಣನಲ್ಲ ಅಥವಾ ಅದಕ್ಕೆ ಉತ್ತರವನ್ನು ನಾನು ಕೊಡುವಂಥದ್ದು ಸೂಕ್ತವಲ್ಲ ಏಕೆಂದರೆ ಹಿಂದೆ ಸರ್ಕಾರದಲ್ಲಿ ಯಾರ್ಯಾರು ಮಂತ್ರಿಗಳಿದ್ದರು. ಅವರ ಕ್ಷೇತ್ರದಲ್ಲಿ ಅವರೇ ಪ್ರಭಾವಿ ಮಂತ್ರಿಗಳಾಗಿದ್ದರು ಆ ಸಮಸ್ಯೆಗಳೇನಿತ್ತು, ಅದು ಅವರಿಗೆ ಗೊತ್ತಿರುವುದರಿಂದ ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಇಲಾಖೆಯಿಂದ ಉತ್ತರ ಕೊಟ್ಟರತಕ್ಕಂಥದ್ದು, ಅಲ್ಲಿ ಸೂರಕ್ಕೆ 70 ಪರ್ಸೆಂಟ್ ಖಾಸಗಿ ವ್ಯವಸ್ಥೆ ಇರುವುದರಿಂದ 30 ಪರ್ಸೆಂಟ್ ಅಷ್ಟೇ ಸರ್ಕಾರಿ ಬಸ್ಸುಗಳು ಅಲ್ಲಿ ಓಡಾಡುತ್ತಿರುವುದರಿಂದ, ಮೊದಲು ಅಲ್ಲಿ ಅವಶ್ಯಕತೆ ಬಸ್‌ನಿಲ್ದಾಣದ್ದು ಇದೆ ಏನ್ನುವುದನ್ನು ಅಂದುಕೊಂಡಿರಲಿಲ್ಲ ಎಂದು ಹೇಳಿದ್ದಾರೆ ಆದರೆ ಮಾನ್ಯ ಶಾಸಕರು ಅಲ್ಲಿ ಬಸ್‌ನಿಲ್ದಾಣದ ಅವಶ್ಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ಲ್ಯಾಂಡ್ ಅನ್ನು ಕೋರ್ಟ್‌ನಲ್ಲಿರುವಂತಾದ್ದು ಅದರ ಬಗ್ಗೆ ತೀರ್ಮಾನವಾಗಿ ಒದಗಿಸಿಕೊಡುತ್ತೇವೆ ಹೇಳುತ್ತಾರೆ. ಅದರಂತೆ ಅವರು ತಕ್ಷಣ ಲ್ಯಾಂಡ್ ಅನ್ನು ಒದಗಿಸಿಕೊಟ್ಟರೆ ನಮ್ಮ ಸಂಸ್ಥೆಗೆ, ಅದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ. ತಮ್ಮ ಕೈಲಾದಂತಹ ಸ್ಥಳೀಯ ಅನುದಾನದ ಸಹಾಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿ. ಅದರ ಬಗ್ಗೆ ಖಂಡಿತ ತಕ್ಷಣವೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಹಿಂದೆ ಮಾನ್ಯ ಪಿ.ಜಿ.ಆರ್.ಸಿಂಧ್ಯರವರು ಸಾರಿಗೆ ಸಚಿವರಾಗಿದ್ದಾಗಲೂ ಕೂಡ ನಾನು ಕರೆದು ಕೊಂಡು ಹೋಗಿಬಿಟ್ಟು ಇದೇ ರೀತಿಯಲ್ಲಿ ಅದರ ಬಗ್ಗೆ ಒಂದು ಮೀಟಿಂಗ್ ಮಾಡಿಬಿಟ್ಟು ಲ್ಯಾಂಡ್ ಹ್ಯಾಂಡ್‌ಓವರ್ ಮಾಡುತ್ತಾರೆನ್ನುವಂತಹ ಸಂದರ್ಭದಲ್ಲಿ

ಒಂದು ಜಾಗ ತೋರಿಸಿದ್ದೆವು. ಈಗಲೂ ಕೂಡ 10 ಎಕರೆ ಜಾಗವನ್ನು ಡಿಪೋಗೆ ಎಂದು ಕಾದಿರಿಸಿದ್ದೇವೆ. ಆದರೆ ಈ ಸಮಸ್ಯೆ ಎಲ್ಲಿ ಬಂತೆಂದರೆ ಬಸ್‌ಸ್ಟ್ಯಾಂಡ್ ಒಳಗಡೆಗೆ ಆಗುವುದಿಲ್ಲ, ಅದನ್ನು ರೋಡ್ ಪಕ್ಕದಲ್ಲಿ ಮಾಡಬೇಕು ಎನ್ನುವ ಸಂದರ್ಭ ಬಂದಾಗ, ಸರ್ಕಾರಿ ಜಾಗದಲ್ಲಿ ಜನ ಹೋಗಿ ಅದರ ಬಗ್ಗೆ ನಾನಾರೀತಿಯಲ್ಲಿ ಗೊಂದಲ ಆದಂತಹ ಸಂದರ್ಭದಲ್ಲಿ ಈ ಸಮಸ್ಯೆ ಉದ್ಭವವಾಯಿತು. ಈಗ ಶಾಸಕರ ನಿಧಿಯಿಂದ 20 ಲಕ್ಷ ರೂಪಾಯಿಗಳನ್ನು ನಾವು ಕೊಟ್ಟುಬಿಟ್ಟು, ಕಾಂಪೌಂಡ್‌ಗೆ ಮತ್ತು ಕನಿಷ್ಠ ಮೂಲಭೂತ ಸೌಕರ್ಯ ಮಾಡಬೇಕೆನ್ನುವ ದೃಷ್ಟಿಯಿಂದ ಮಾಡಿದೆವು. ಹಾಗಾಗಿ ನೀವು, ಅರ್ಲಿಯರ್ ಆಗಿ ಯಾರು ಇದ್ದರು? ಏನು ಪ್ರಭಾವಿಗಳು ಇದ್ದರು ಅದರ ಬದಲು ಇವತ್ತು ನಿಮ್ಮ ಪ್ರಭಾವ ನಮಗೆ ಬೇಕಾಗಿದೆ ಏನ್ನುವುದಕ್ಕೆ ಮಾತ್ರ ನಾವು ಕೇಳಿದ್ದೇವೆಯೇ ಹೊರತು ನೀವಿಲ್ಲದಿದ್ದರೆ ನಾವು ಕೇಳುವುದಕ್ಕೆ ಹೋಗುತ್ತಿದ್ದೆವಾ? ನೀವು ಸಾರಿಗೆ ಸಚಿವರು ಆಗಿದ್ದೀರಿ ಎನ್ನುವ ಕಾರಣಕ್ಕೆ ನಾವು ಕೇಳುತ್ತಿದ್ದೇವೆ. ನಾನು ಹಿಂದೆ ಇದ್ದಂತಹ ಸಾರಿಗೆ ಸಚಿವರನ್ನು ಕೇಳಿದ್ದೇವೆ, ಅದಕ್ಕಿಂತ ಮೊದಲೂ ಕೂಡ ಕೇಳಿದ್ದೇವೆ, ಸೊರಬ ತಾಲ್ಲೂಕಿನಲ್ಲಿ ಯಾವ್ಯಾವ ಮಂತ್ರಿಗಳಿದ್ದರು? ಯಾರ್ಯಾರು ಮುಖ್ಯಮಂತ್ರಿಗಳು ಇದ್ದರು ಏನ್ನುವುದು ಇಡೀ ಕರ್ನಾಟಕಕ್ಕೆ ಗೊತ್ತಿದೆ. ಆ ರಾಜಕಾರಣವನ್ನು ತಮ್ಮ ಹತ್ತಿರ ಕೇಳುವುದಕ್ಕೆ ನಾನು ಇಲ್ಲಿ ಹೇಳಲಿಲ್ಲ. ನಾನು ಹೇಳಿರುವುದು ಮೂಲಭೂತವಾಗಿ ಒಂದು ಬಸ್‌ಸ್ಟ್ಯಾಂಡ್ ಬೇಕು ಎಂದು ಮಾತ್ರ ಹೇಳಿದೆ. ಅದಕ್ಕೆ ಜಾಗ ಕೊಟ್ಟಿದ್ದೇವೆ, ನೀವೇನು ಬಿಜಾಪುರದ ವಿಚಾರದಲ್ಲಿ ತಾವು ಮಾತನಾಡಿದಿರಿ ಹಾಗೂ ತಮ್ಮ ನಿಧಿಯಿಂದ ಹಣವನ್ನು ಕೊಡಿ ಎಂದು ಕೂಡ ಹೇಳಿದಿರಿ ಈಗಾಗಲೇ 20 ಲಕ್ಷ ರೂಪಾಯಿ ಶಾಸಕರ ನಿಧಿಯಿಂದ ಕೂಡ ಕೊಟ್ಟಾಗಿದೆ ಎಂದಿದ್ದರೂ, ನೀವು ಉಳಿದಿರತಕ್ಕಂಥ ಹಣವನ್ನು ಒದಗಿಸಿಕೊಡುತ್ತೇವೆ, ನೀವು ಯಾರಾದರೂ ಅಧಿಕಾರಿಗಳನ್ನು ತಕ್ಷಣ ಕಳುಹಿಸಿಕೊಡುತ್ತೇವೆ ಎಂದು ಉತ್ತರ ಕೊಟ್ಟರೆ ನಮಗೆ ತುಂಬಾ ಸಂತೋಷವಾಗುತ್ತದೆ.

ಶ್ರೀ ಎನ್. ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಸದಸ್ಯರಿಗೆ ಉತ್ತರ ಕೊಡಬೇಕಾದರೆ ಅವರು ಬಹಳ ಕಾಳಜಿ ಇರುವಂತಹ ಸರ್ಕಾರ ಏಕೆ ಬಸ್‌ನಿಲ್ದಾಣ ಮಾಡುತ್ತಿಲ್ಲವೆಂದು ಕೇಳಿದರು. ಅದಕ್ಕೋಸ್ಕರ ಅಷ್ಟು ಉತ್ತರ ಕೊಟ್ಟೆ ವಿನಃ ಖಂಡಿತ ನೀವು ಬಸ್‌ನಿಲ್ದಾಣ ಮಾಡಿ ಎಂದಿದ್ದರೆ ನಾನು ಮಾಡುತ್ತೇನೆ ಎಂದು ಹೇಳುತ್ತಿದ್ದೆ. ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಬಸ್ ನಿಲ್ದಾಣಗಳನ್ನು ನವೀಕರಣ ಮಾಡುವುದು, ಹೊಸ ಬಸ್‌ನಿಲ್ದಾಣ ಮಾಡುವುದು ಮತ್ತು ಇನ್ನುಳಿದಂತೆ ಅಭಿವೃದ್ಧಿ ಮಾಡುವಂತಹ ಕಾಳಜಿ ಇರುವಂತಹ

ಸರ್ಕಾರ, ತಾಲ್ಲೂಕು ಕೇಂದ್ರದಲ್ಲಿ ಏಕೆ ಬಸ್‌ನಿಲ್ದಾಣ ಮಾಡುತ್ತಿಲ್ಲವೆಂದು ಕೇಳಿದಿರಿ, ಅದಕ್ಕೆ ನಾನು ಉತ್ತರವನ್ನು ಹೇಳಿದೆ. ಆದುದರಿಂದ ಆ ವಿಚಾರವನ್ನು ಕೈಬಿಡೋಣ ತಾವು 20 ಲಕ್ಷ ರೂಪಾಯಿ ಹಣವನ್ನು ಹಾಗೂ ಜಾಗವನ್ನು ಒದಗಿಸಿದ್ದೇವೆ ಎಂದು ಹೇಳುತ್ತೀರಿ ಇನ್ನೊಂದು ವಾರದಲ್ಲಿ ತಮ್ಮನ್ನು ಭೇಟಿ ಮಾಡಿ, ನಮ್ಮ ಅಧಿಕಾರಿಗಳಿಗೆ ಹೇಳಿ ಅದನ್ನು ಮುಂದುವರೆಸುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ನಮ್ಮ ಕಡೂರಿನದು ಕೂಡ . . .

ಅಧ್ಯಕ್ಷರು : ಆಯಿತು, ಒಪ್ಪಿಕೊಂಡಮೇಲೆ ಮತ್ತೇನಿದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಾನು 2ನೇ ಪ್ರಶ್ನೆಯನ್ನು ಕೇಳಲಿಲ್ಲ.

ಅಧ್ಯಕ್ಷರು : ಅಗತ್ಯವಿಲ್ಲ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಅಗತ್ಯವಿಲ್ಲ ಅಲ್ಲ ಮಾನ್ಯ ಕೃಷ್ಣಮೂರ್ತಿಯವರೇ Let me finish at least. ಮಾನ್ಯ ಸಾರಿಗೆ ಸಚಿವರೆ, ಇಲ್ಲಿ ಬಸ್‌ಸ್ಟ್ಯಾಂಡ್ ಕಾಮಗಾರಿಯನ್ನು ಕೆ.ಎಸ್.ಆರ್.ಟಿ.ಸಿ ಯ ಯಾವ ವಿಭಾಗ ನಿರ್ವಹಿಸುವುದು ಎಂದು ಕೇಳಿದ್ದೇನೆ. ಏತಕ್ಕೋಸ್ಕರ ಕೇಳಿದೆ ಎಂದರೆ ಇವತ್ತು ನಾವು ಬಸ್ಸನ್ನು ಕೇಳಬೇಕಾದರೆ ಒಂದು ಶಾಲೆಗೆ ಬೇಕಾದರೆ, ನಾನು ಶಿರಸಿ ಡಿಪೋಗೆ ಕೇಳುತ್ತೇನೆ, ಹಾನಗಲ್ ಡಿಪೋಗೆ ಕೇಳುತ್ತೇನೆ, ಮತ್ತೆ ದಾವಣಗೆರೆ ಡಿಪೋಗೆ ಕೇಳುತ್ತೇನೆ. ನಿರ್ದಿಷ್ಟವಾಗಿ ಈ ತಾಲ್ಲೂಕು ಯಾವ ಡಿಪೋಗೆ ಸೇರಿದೆ ಏನ್ನುವುದು ನಮಗೆ ಮಾಹಿತಿ ಇಲ್ಲ. ಪ್ರತಿಸಾರಿ ಕೂಡ ನಾವು ಇದನ್ನು ಶಿವಮೊಗ್ಗ ಡಿಪೋಗೆ ಸೇರಿಸುತ್ತೀರಾ ಎಂದರೆ ಇಲ್ಲ, ಇದು ಶಿರಸಿ ಡಿಪೋ ಹತ್ತಿರ ಇದೆ, ಶಿರಸಿಗೆ ಹೋಗಿ ಎಂದು ಹೇಳುತ್ತಾರೆ. ಹಾನಗಲ್ ಡಿಪೋ ಹತ್ತಿರ ಆಗುತ್ತದೆ ಹಾನಗಲ್‌ಗೆ ಹೋಗಿ ಎಂದು ಹೇಳುತ್ತಾರೆ. ದಾವಣಗೆರೆ ಹೀಗೆ I am in touch with everybody, ದಯಮಾಡಿ ಯಾವುದಾದರೂ ಒಂದು ಡಿಪೋಗೆ ನಮ್ಮನ್ನು ಸೇರಿಸುವಂತಹ ಕೆಲಸವನ್ನು ಮಾಡಿದರೆ ತುಂಬಾ ಅನುಕೂಲವಾಗುತ್ತದೆ.

ಶ್ರೀ ಎನ್. ಚೆಲುವರಾಯ ಸ್ವಾಮಿ : ಯಾವ ಡಿಪೋಗೆ ಸೇರಿಸಬೇಕು ಏನ್ನುವುದರ ಬಗ್ಗೆ ತಮ್ಮ ಜೊತೆ ಮಾತನಾಡಿ ನಾನು ಸೂಚನೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ಕೃಷ್ಣಮೂರ್ತಿಯವರೇ ಎಲ್ಲಾ ಹೀಗೆ ಮಾತನಾಡಿದರೆ ನಾನು ಹೇಗೆ ಮುಗಿಸುವುದು ಒಂದು ಘಂಟೆನಲ್ಲಿ

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಇಲ್ಲ, ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ದಯವಿಟ್ಟು ಈಗೇನು ಮಾನ್ಯ ಕುಮಾರ್ ಬಂಗಾರಪ್ಪನವರು ಮಾತನಾಡಿದರು, ರಾಜ್ಯದಲ್ಲಿ ಯಾವುದೇ ಬಸ್‌ನಿಲ್ದಾಣ ಇರಬಹುದು, ಅವುಗಳಲ್ಲಿ ಯವುದು ಅರ್ಧಂಬರ್ಧ ಆಗಿದೆ ಇವುಗಳನ್ನು ಪರಿಪೂರ್ಣ ಮಾಡಲಿ. ಏಕೆಂದರೆ ಕೆಲವೊಂದು ಡಿಪೋ ಇದ್ದರೂ ಕೂಡ ಆ ಡಿಪೋಗಳಿಗೆ ಬಸ್ಸುಗಳನ್ನು ಕೊಡುತ್ತಿಲ್ಲ. ಅಥವಾ ಖಾಸಗಿ ಬಸುಗಳನ್ನು ಓಡಿಸುವುದಕ್ಕೆ ಪರ್ಮಿಟ್ ಕೊಟ್ಟು ಅವಕಾಶ ಮಾಡಿಕೊಡಲಿ. ಇವರೂ ಬಸುಗಳನ್ನು ಓಡಿಸುವುದಿಲ್ಲ, ಖಾಸಗಿ ಬಸ್ಸುಗಳನ್ನು ಓಡಿಸುವುದಕ್ಕು ಬಿಡುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಸರಿಯಾಗಿ ಸಾರಿಗೆ ಸಂಪರ್ಕವನ್ನು ಕಲ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಮೊನ್ನೆ ಮಾನ್ಯ ಸಚಿವರು, ಬೇರೆ ಕಡೆ ಸರ್ಕಾರಿ ಬಸ್ಸುಗಳನ್ನು ಓಡಿಸುವುದಕ್ಕೆ ಆಗದೇ ಇದ್ದ ಕಡೆ ಖಾಸಗಿ ಬಸ್ಸುಗಳಿಗೆ ಪರ್ಮಿಟ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಮಾನ್ಯ ಸಚಿವರು ಈ ಸಭೆಯಲ್ಲಿ ದೃಢಪಡಿಸಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚೆಲುವರಾಯ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಸಂಸ್ಥೆಯ ನಾಲ್ಕು ವಿಭಾಗಗಳು ಸಮರ್ಥವಾಗಿದೆ. ಅವರು ಎಲ್ಲಿ ಹೆಚ್ಚು ಬಸ್ಸುಗಳು ಕೇಳಿದ್ದಾರೆ. ಅಲ್ಲಿ ಬಸ್ಸುಗಳನ್ನು ಕೊಡುವುದಕ್ಕೆ ತಯಾರಿಸಿದ್ದೇವೆ. ಮಾನ್ಯ ಅಧ್ಯಕ್ಷರು ನನಗೆ ಹೇಳಿದ್ದಾರೆ, ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಾರೆ, ತಾವು ಮಾತನಾಡಿ ಅವರಿಗೆ ನಾನು ಉತ್ತರ ಕೊಡಬೇಕಲ್ಲಾ ಅಧ್ಯಕ್ಷರು ಏನು ಹೇಳುತ್ತಾರೆ ಕೇಳೊಣ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾವು ಕೋಲಾರದವರಾ ಸಫರ್ ಆಗುತ್ತಿದ್ದೇವೆ ನಾನು ನಿಮಗೆ ಸಹಾಯ ಮಾಡುವುದಕ್ಕೆ ನಿಂತಿರುವುದು. ಏನಾಗುತ್ತದೆ ಎಂದರೆ ಪಾಕೆಟ್ ಸ್ಕೀಮ್ ಎಂದು ಮಾಡಿದ್ದಾರೆ. ಎಲ್ಲಾ ನ್ಯಾಷನಲೈಜ್ ಆಯಿತು. ಇವರು ಬಸ್ಸುಗಳನ್ನು ಹಾಕುವುದಿಲ್ಲ ಪ್ರೈವೇಟ್‌ನವರು ಬರುವ ಹಾಗೆ ಇಲ್ಲ ಅಲ್ಲಿ ಆರ್.ಟಿ.ಎ. ಪರ್ಮಿಟ್ ಕೊಟ್ಟರೆ ಒಂದು ಅಪೀಲ್ ಹಾಕುತ್ತಾರೆ. ಅವರು ಬರಬಾರದು ಎಂದು ಹೇಳಿ ಅಪೀಲ್ ಹಾಕುವುದರಲ್ಲಿ ಕೆ.ಎಸ್.ಆರ್.ಟಿ.ಸಿ. ಯವರು ನಿಸ್ಸೀಮರು. ಇವರು ಬಸ್ಸು ಕಳುಹಿಸಬಾರದು, ಅವರೂ ಇರಬಾರದು. ನಮಗೆ ಚಕ್ಕಡಿ ಗಾಡಿ ಕೊಟ್ಟರೆ ಕೆ.ಎಸ್.ಆರ್.ಟಿ.ಸಿ ಯವರ ಕೃಪೆ ಎಂದು ಹೇಳಿ ನಾವು ಅದರಲ್ಲಿ ಓಡಾಡಬಹುದು. ಹತ್ತು, ಇಪ್ಪತ್ತು ವರ್ಷಗಳಿಂದ ಓಡಾಡುತ್ತಿದ್ದಂತಹ ಬಸ್ಸುಗಳನ್ನೆಲ್ಲಾ ವಿತ್‌ಡ್ರಾ ಮಾಡಿದ್ದಾರೆ. ಏಕೆ ಅದನ್ನು ವಿತ್‌ಡ್ರಾ ಮಾಡುತ್ತಾರೆ? ಅದಕ್ಕೆ ಕಾರಣ ಹೇಳುವುದಿಲ್ಲ ಪ್ರೈವೇಟ್ ನವರು ಬಸ್ಸುಗಳನ್ನು ಹಾಕಬಾರದು. ನಾವು ನ್ಯಾಷನಲೈಸೇಷನ್‌ಗೆ ವಿರೋಧ

ವೇನಲ್ಲ ನಿಮಗೆ ಆಗದಿದ್ದರೆ ಆ ಏರಿಯಾಗಳನ್ನು ಬಿಟ್ಟುಕೊಡುವುದಕ್ಕೆ ಏನು ಕಷ್ಟ? ಅದಕ್ಕೆ ಅವರೇನು ಮಾಡುತ್ತಾರೆ, ರೂಟ್ ಒಂದು ಕಡೆಗೆ ತೆಗೆದುಕೊಳ್ಳುತ್ತಾರೆ, ಪೊಲೀಸ್‌ನವರಿಗೆ ಅಡ್ಜೆಸ್ಟ್ ಮಾಡಿಕೊಳ್ಳುತ್ತಾರೆ, ಆ ಬ್ರೇಕ್ ಇನ್ಸ್‌ಪೆಕ್ಟರ್‌ಗೆ ಅಡ್ಜಸ್ಟ್ ಮಾಡಿಕೊಳ್ಳುತ್ತಾರೆ. ಮೇನ್ ರೋಡ್‌ನಲ್ಲಿ ಓಡಾಡುತ್ತಾರೆ. ಆದಾಗಬಹುದು. ನ್ಯಾಯವಾಗಿ ಪರ್ಮಿಟ್ ತೆಗೆದುಕೊಳ್ಳುವುದಕ್ಕೆ ಇದು ಫ್ಯಾಕ್ಟ್ಸ್ ಹೌದೋ ಅಲ್ಲವೋ ನೀವು ಒಂದು ಕಾನ್‌ಫರೆನ್ಸ್ ಕರೆಯಿರಿ. ಇದರ ಬಗ್ಗೆ ನೂರು ಇನ್‌ಸ್ಟೆನ್ಸ್‌ನ್ ಕೊಡುತ್ತೇನೆ. ಇಲ್ಲ ಬನ್ನಿ, ನಾಳೆಗೆ ತೆದೆದುಕೊಳ್ಳಿ, call your officers. We will go and demonstrate each case. ಹೇಗೆ ಮಾಡುತ್ತಾರೆ ಎಂದು. Either you should provide the transport or you should allow the private operator. In the absence of that, ಜನ ಹೇಗೆ ಓಡಾಡುವುದು?

ಅಧ್ಯಕ್ಷರು : ನೀವು ಈ ತರಹ ಕೇಳಿದರೆ, ಪ್ರಶ್ನೋತ್ತರ ವೇಳೆಯನ್ನು ಮುಗಿಸುವುದು ಹೇಗೆ ಎಂದು ಹೇಳಿ?

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರನ್ನು ಕೇಳುವುದೇನೆಂದರೆ, ಅವರಿಗೆ ಬಸ್‌ಸ್ಟ್ಯಾಂಡ್ ಕಟ್ಟುವುದಕ್ಕೆ ಕಷ್ಟ ಇದೆ, ತೊಂದರೆ ಇದೆ ಎಂದು ಹೇಳಿದಿರಿ. ನಮ್ಮ ಗದಗಿನಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಬಸ್‌ಸ್ಟಾಂಡ್ ಕಟ್ಟಿದ್ದಾರೆ. ಆದರೆ ಅದನ್ನು ಅಪರೇಟ್ ಮಾಡುತ್ತಿಲ್ಲ. ಅಲ್ಲಿ ನಡೀಬಾರದ್ದು ನಡಿಯುತ್ತಿದೆ. ಅಲ್ಲಿಗೆ ಬಸುಗಳೇ ಹೋಗುತ್ತಿಲ್ಲ. ಕೋಟಿಗಟ್ಟಲೆ ಖರ್ಚಾಗಿದೆ ಆರು ತಿಂಗಳ ಹಿಂದೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಅದರ ಉದ್ಘಾಟನೆ ಮಾಡುವುದಕ್ಕೆ ಬಂದಿದ್ದರು. ದುರಂತ ಇದು. ಅಂತಹ ಪರಿಸ್ಥಿತಿ ಇದೆ. ಇವರಿಗೆ ಬಸ್ಸುಗಳನ್ನು ಬಿಡುವುದಿಲ್ಲವೆನ್ನುವಂತಹ ಪರಿಸ್ಥಿತಿ. ನಮ್ಮ ಕಡೆ ಏನಾಗಿದೆ ಎಂದರೆ ಬಸ್ಸುಗಳು ಓಡುತ್ತವೆ. ಪ್ರೈವೇಟ್ ನವರಿಗೆ ಕಂಟ್ರಾಕ್ಟ್ ರೀತಿಯಲ್ಲಿ ತಂದು ರೆಗ್ಯುಲರ್ ಆಗಿ ಓಡಿಸಿ ಇವತ್ತು ಮುಳುಗುವ ಸ್ಥಿತಿಗೆ ಬಂದುನಿಂತಿದೆ. ನೀವು ಅದನ್ನೆಲ್ಲಾ ನಿಲ್ಲಿಸದೆ ಇದ್ದರೆ ಖಂಡಿತವಾಗಿ ಕೆ.ಎಸ್.ಆರ್.ಟಿ.ಸಿ ಮುಳುಗಿ ಹೋಗುತ್ತದೆನ್ನುವ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕೆ ತಾವು ಏನು ಮಾಡುತ್ತೀರಿ ಎಂದೂ ಕೂಡ ಹೇಳಬೇಕು.

ಶ್ರೀ ಎನ್. ಚೆಲುವರಾಯ ಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣಮೂರ್ತಿಯವರು ಹೇಳಿರತಕ್ಕಂಥ ಸಮಸ್ಯೆ ಏನಿದೆ ಅರ್ಧ ಅಥವಾ ಭಾಗಶಃ ಪ್ರಾರಂಭ ಮಾಡಿರುವ ರಾಜ್ಯದ ಯಾವುದೇ ಭಾಗದಲ್ಲಿರುವ ಬಸ್‌ಸ್ಟಾಂಡ್ ಏನಿದೆ ಅದನ್ನು ಕಂಪ್ಲೀಟ್ ಮಾಡುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ಎರಡನೆಯದಾಗಿ ಬಸ್ಸುಗಳದ್ದು ಸಮಸ್ಯೆ ಎಲ್ಲಿದೆ ಅಲ್ಲಿ ಬಸ್ಸುಗಳನ್ನು ಒದಗಿಸುವುದಕ್ಕೆ ನಾವು ತಯಾರಾಗಿದ್ದೇವೆ ಏನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದರೆ ಮಾನ್ಯ ರಮೇಶ್‌ಕುಮಾರ್‌ರವರು, ಹಿರಿಯ ಸದಸ್ಯರ ಏನು ಕೆಲವು ಸಮಸ್ಯೆಗಳನ್ನು ಹೇಳಿದ್ದಾರೆ, ಅದರ ಬಗ್ಗೆ ತಕ್ಷಣ ಅವರ ಜೊತೆಯಲ್ಲಿ ಸದನ ನಡೆಯುವಂತಹ ಸಂದರ್ಭದಲ್ಲಿಯೇ ಮಾತನಾಡುತ್ತೇನೆ. ಆ ತರಹ ಏನಾದರೂ ಇದ್ದರೆ. ಪ್ರೈವೇಟ್‌ನವರಿಗೆ ಕೊಟ್ಟಿರುವಂತಹ ಪರ್ಮಿಟ್ ವಿತ್‌ಡ್ರಾ ಮಾಡಿ, ನಾವೂ ಅಲ್ಲಿ ಬಸ್ಸುಗಳನ್ನು ಕೊಡದೆ ಜನರಿಗೆ ಅನಾನುಕೂಲ ಆಗುತ್ತಿದ್ದರೆ ಅದನ್ನು ತಕ್ಷಣ ಸರಿಪಡಿಸುವುದಕ್ಕೆ ನಾವು ತಯಾರಿಸಿದ್ದೇವೆ. ಮತ್ತು ಮಾಡುತ್ತೇವೆ. ಮಾನ್ಯ ಪಾಟೀಲ್‌ರವರು ಏನು ಹೇಳುತ್ತಿದ್ದಾರೆ, ಅವರ ಕಡೆ ಬಸ್‌ಸ್ಟಾಂಡ್ ಉದ್ಘಾಟನೆ ಮಾಡಿ ಅಲ್ಲಿ ಎಲ್ಲಾ ಕೆಲಸ ಮುಗಿಸಿ, ಅಲ್ಲಿಗೆ ಬಸ್ ಹೋಗದೆ ಬೇರೆ ಕಡ ಬಸ್ಸು ಹೋಗತಕ್ಕಂಥಾದ್ದು ಸೂಕ್ತವಲ್ಲ. ಅದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು ನಾಳೆಯಿಂದಲೇ ಆ ಸ್ಟಾಂಡ್‌ಗೆ ಬಸ್ಸುಗಳು ಹೋಗುವಂತಹ ಕೆಲಸವನ್ನು ಮುಂದುವರೆಸಬೇಕಾಗುತ್ತದೆ. ಅದರ ಬಗ್ಗೆ ಏನಾದರೂ ವ್ಯತ್ಯಾಸವಾದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ವಾಟಾಳ್ ನಾಗರಾಜ್ ಕೇಳಿ. ಆ ಪ್ರಶ್ನೋತ್ತರ ಮುಗಿದಿದೆ. ಈಗ ಶ್ರೀನಿವಾಸ ಗೌಡರೇ ಕುಳಿತುಕೊಳ್ಳಿ, ಪ್ರಶ್ನೋತ್ತರದಲ್ಲಿ ಈ ತರಹ ಮಾಡುವುದಕ್ಕಾಗುವುದಿಲ್ಲ.

ಶ್ರೀಕೆ.ಶ್ರೀನಿವಾಸ ಗೌಡ : ಪೊಲೀಸ್‌ನವರೇ ಪರ್ಮಿಟ್ ಕೊಟ್ಟಿದ್ದಾರೆ. ಇವರದ್ದು ಯಾವುದೂ ಪರ್ಮಿಷನ್ ಬೇಡ. ಪೊಲೀಸ್ ಎಂದೇ ಅವರು ಓಡಿಸುತ್ತಾರೆ.

ಸರೋಜಿನಿ ಮಹಿಷಿ ವರದಿ ಹಾಗೂ ವಾಟಾಳ್ ನಾಗರಾಜ್‌ರವರ ಗಡಿನಾಡ, ಅಧ್ಯಯನ ಸಮಿತಿ ವರದಿಗಳ ಮೇಲೆ ಕೈಗೊಂಡ ಕ್ರಮಗಳು.

(7) 117. ಶ್ರೀ ವಾಟಾಲ್ ನಾಗರಾಜ್ (ಚಾಮರಾಜನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಸರೋಜಿನಿ ಮಹಿಷಿ ವರದಿ ಹಾಗೂ ವಾಟಾಳ್‌ನಾಗರಾಜ್‌ರವರ ಗಡಿನಾಡು ಅಧ್ಯಯನ ಸಮಿತಿ ವರದಿಗಳು ಸರ್ಕಾರದ ಕೈಸೇರಿ ಎಷ್ಟು ವರ್ಷಗಳಾಗಿವೆ;

ಆ) ಸದರಿ ವರದಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಮೇಲ್ಕಂಡ ವರದಿಗಳನ್ನು ಸರ್ಕಾರ ಎಂದಿನಿಂದ ಅನುಷ್ಠಾನ ಗೊಳಿಸುತ್ತಿದೆ;